ಓಂಶಾಂತಿ, ಬಾಪ್ ದಾದಾ, ಅವ್ಯಕ್ತಮುರಳಿ 16-10-1969.

**(ओम शान्ति, बापदादा. अव्यक्त मुरली 16-10-1969)**

*ಪರೀಕ್ಷಿಸುವ/ ಪರರಿಶೀಲಿಸುವ ಶಕ್ತಿಯನ್ನು ತೀವ್ರಗೊಳಿಸಿ* **(परखने की शक्ति को तीव्र बनाओ)**

ಇಂದು ವಿಶೇಷವಾಗಿ ಏನನ್ನು ನೋಡುತ್ತಿದ್ದಾರೆ? ಪರಿವರ್ತನೆಯನ್ನು ಹೇಗೆ ನೋಡುತ್ತೀರಿ? ಈ ಗುಂಪಿನಲ್ಲಿ ಪ್ರಶ್ನೆಗೆ ಉತ್ತರವನ್ನು ಕೊಡಲು ಯಾರು ಹುಷಾರಾಗಿದ್ದಾರೆ? ನೋಡುವ ಹಾಗೂ ಪರೀಕ್ಷಿಸುವ ಶಕ್ತಿ ಎಷ್ಟಿದೆ? ಒಳ್ಳೆಯದು - ಯೋಗದ ಸ್ಥಿತಿಯಲ್ಲಿ ನಿರಂತರ ಇರುವವರು ಯಾರು? ದಿವ್ಯಗುಣಗಳ ಧಾರಣೆಯಲ್ಲಿ ದಿವ್ಯಗುಣಮೂರ್ತಿ ಯಾರು ಕಂಡುಬರುತ್ತಾರೆ? ಇದನ್ನು ಏಕೆ ಕೇಳುತ್ತಿದ್ದೇವೆಂದರೆ ಪರೀಕ್ಷಿಸುವ ಅಭ್ಯಾಸವಿದ್ದರೆ ಜಗತ್ತಿನಲ್ಲಿ ಕಾರ್ಯನಿರ್ವಹಣೆಗೆ ಹೋದಾಗ ಅಸುರಿ ಸಂಪ್ರದಾಯದವರೊಂದಿಗೆ ಸಂಬಂಧ ಇಟ್ಟುಕೊಳ್ಳಬೇಕಾಗುತ್ತದೆ ಆಗ ಅನೇಕ ಮಾತುಗಳಲ್ಲಿ ವಿಜಯಿಯಾಗುವಿರಿ. ಪರೀಕ್ಷಿಸುವ ಶಕ್ತಿಯಿಲ್ಲದಿದ್ದರೆ ವಿಜಯಿಯಾಗುವುದಿಲ್ಲ. ತಮ್ಮದೇ ಪರಿವಾರದಲ್ಲಿ ಎಷ್ಟರಮಟ್ಟಿಗೆ ಪರೀಕ್ಷಿಸಬಲ್ಲಿರಿ ಎಂಬುದನ್ನು ನೋಡಿದೆವು. ಹಾಗೆ ನೋಡಿದರೆ ಎಲ್ಲರೂ ಒಬ್ಬರಿಗಿಂತ ಒಬ್ಬರು ಶ್ರೇಷ್ಠ ರತ್ನಗಳು ಆದರೆ ಪರೀಕ್ಷಿಸುವ ಅಭ್ಯಾಸ ಅವಶ್ಯವಾಗಿ ಬೇಕು. ಇದನ್ನು ಸಣ್ಣ ಮಾತೆಂದು ತಿಳಿಯಬೇಡಿ, ಇದರಿಂದಲೇ ನಂಬರ್ ಪಡೆಯಬಹುದು. ಯಾವುದೇ ಪರಿಸ್ಥಿತಿಯನ್ನು, ಯಾವುದೇ ಸಂಕಲ್ಪದ ಆತ್ಮರನ್ನು ವರ್ತಮಾನ ಮತ್ತು ಭವಿಷ್ಯಗಳನ್ನು ಪರೀಕ್ಷಿಸುವ ಅಭ್ಯಾಸ ಬೇಕು. ವಿಶೇಷವಾಗಿ ಪಾಂಡವ ಸೇನೆಗೆ ಪರೀಕ್ಷಿಸುವ ಶಕ್ತಿಯ ಬಹಳ ಅವಶ್ಯಕತೆಯಿದೆ. ಏಕೆಂದರೆ ಗೋಪರಿಗೆ ಅನೇಕ ಪ್ರಕಾರದ ಪರಿಸ್ಥಿತಿಗಳು ಎದುರಿಗೆ ಬರುತ್ತವೆ, ಅವುಗಳನ್ನು ಎದುರಿಸಲು ಬುದ್ಧಿಯ ಸ್ವಚ್ಛತೆ ಬಹಳ ಆವಶ್ಯಕವಾಗಿದೆ. ಪರೀಕ್ಷಿಸುವ ಶಕ್ತಿ ಹೇಗೆ ಬರುತ್ತದೆ? ಇದನ್ನು ತೀವ್ರ ಗೊಳಿಸುವ ಮುಖ್ಯ ಸಾಧನ ಯಾವುದು? ಪರೀಕ್ಷಿಸುವ ವಿಧಿ ಯಾವುದಾಗಿರಬೇಕು? ನಿಮ್ಮೆದುರಿಗೆ ಯಾರೇ ಬಂದರೂ ಅವರನ್ನು ಪರೀಕ್ಷಿಸಬಲ್ಲಿರಾ? (ಎಲ್ಲರೂ ತಮ್ಮ ವಿಚಾರವನ್ನು ಹೇಳಿದರು) ರಹಸ್ಯ ಒಂದೇ ಆಗಿದೆ. ಅವ್ಯಕ್ತ ಸ್ಥಿತಿ, ನೆನಪು, ಆತ್ಮಿಕ ಸ್ಥಿತಿ ಎಲ್ಲವು ಅದೇ ಆಗಿದೆ. **ಆದರೆ ಆತ್ಮಿಕ ಸ್ಥಿತಿಯ ಜೊತೆಗೆ ಯಥಾರ್ಥ ರೂಪದಿಂದ ಯಾರ ಬುದ್ಧಿಯಲ್ಲಿ ಹೆಚ್ಚು ವ್ಯರ್ಥ ಸಂಕಲ್ಪಗಳಿಲ್ಲವೋ ಅವರೇ ಪರೀಕ್ಷಿಸಬಲ್ಲರು. ಯಾರಲ್ಲಿ ಹೆಚ್ಚು ಸಂಕಲ್ಪಗಳು ಉತ್ಪನ್ನವಾಗುವವೋ, ವ್ಯರ್ಥ ಸಂಕಲ್ಪಗಳ ಮಿಶ್ರಣವಾಗುವುದು ಅವರ ಬುದ್ಧಿ ಬೇರೆಯವರನ್ನು, ಯಾರು ಹೇಗಿದ್ದಾರೋ ಹಾಗೆ ಪರೀಕ್ಷಿಸಲಾರರು. ಬುದ್ಧಿಯ ಸ್ವಚ್ಛತೆಯೇ ಮೂಲ ರಹಸ್ಯವಾಗಿದೆ. ಎಷ್ಟು ಬುದ್ಧಿಯ ಸ್ವಚ್ಛತೆಯೋ ಅಷ್ಟೇ ಯೋಗಯುಕ್ತ ಸ್ಥಿತಿಯಲ್ಲಿರುವಿರಿ. ಈ ವ್ಯರ್ಥ ಸಂಕಲ್ಪ ಮತ್ತು ವಿಕಲ್ಪಗಳು ಅವ್ಯಕ್ತ ಸ್ಥಿತಿಯಾಗಲು ವಿಘ್ನಗಳಾಗಿವೆ.** ಮತ್ತೆ ಮತ್ತೆ ಈ ಶರೀರದ ಆಕರ್ಷಣೆಯಲ್ಲಿ ಬರುತ್ತೀರಿ ಅದರ ಮೂಲ ಕಾರಣ ಬುದ್ಧಿಯ ಸ್ವಚ್ಛತೆ ಇಲ್ಲದಿರುವುದು. ಬುದ್ಧಿಯ ಸ್ವಚ್ಛತೆ ಎಂದರೆ ಬುದ್ದಿಗೆ ಯಾವ ಮಹಾಮಂತ್ರ ( ಮನ್ಮನಾ ಭವ) ಸಿಕ್ಕಿದೆಯೋ ಅದರಲ್ಲಿ ಬುದ್ಧಿ ಮಗ್ನವಾಗಿರಲಿ. ಒಬ್ಬನ ನೆನಪನ್ನು ಬಿಟ್ಟು ಅನೇಕ ಕಡೆಗೆ ಬುದ್ದಿ ಹೋಗುವ ಕಾರಣ ಬುದ್ಧಿ ಶಕ್ತಿಶಾಲಿಯಾಗಿರುವುದಿಲ್ಲ. ಮತ್ತು ಬುದ್ದಿ ಬಹಳ ಕೆಲಸಗಳ ಕಡೆಗೆ ವ್ಯಸ್ತವಾಗಿದ್ದರೆ ದುರ್ಬಲತೆಯ, ದಣಿವಿನ ಅನುಭವ ಮಾಡಿರಬಹುದು. ಮತ್ತು ಆಗ ಯಥಾರ್ಥ ನಿರ್ಣಯ ಮಾಡಲಾಗದು. ಅದೇ ರೀತಿ ವ್ಯರ್ಥ ಸಂಕಲ್ಪ-ವಿಕಲ್ಪಗಳು ಬುದ್ಧಿಯನ್ನು ದಣಿಸುತ್ತವೆ. ದಣಿದ ಆತ್ಮ ಪರೀಕ್ಷಿಸಲಾರದು ಮತ್ತು ನಿರ್ಣಯ ತೆಗೆದುಕೊಳ್ಳಲಾರದು. ಎಷ್ಟೇ ಹುಷಾರಾದರೂ ದಣಿದಾಗ ಅವರ ಪರೀಕ್ಷಿಸುವಲ್ಲಿ, ನಿರ್ಣಯಿಸುವಲ್ಲಿ ಅಂತರವಿರುತ್ತದೆ. ಇಡೀ ದಿನ ಈ ಸಂಕಲ್ಪಗಳಿಂದ ಬುದ್ಧಿ ದಣಿದಿರುವ ಕಾರಣ ನಿರ್ಣಯ ಮಾಡುವ ಶಕ್ತಿ ಕಡಿಮೆಯಾಗುತ್ತದೆ. ಆದ್ದರಿಂದ ವಿಜಯಿಯಾಗುವುದಿಲ್ಲ. ಸೋಲಿಗೆ ಮುಖ್ಯ ಕಾರಣವೇ ಇದಾಗಿದೆ. ಜಾದೂಗಾರರು ಕೈ ಚಳಕದಿಂದ ಏನೆಲ್ಲವನ್ನು ಮಾಡಿ ತೋರಿಸುತ್ತಾರೆ, ತಕ್ಷಣದಲ್ಲಿಯೇ ಬದಲಿಸಿ ತೋರಿಸುತ್ತಾರೆ, ಅಂತೆಯೇ ಬುದ್ಧಿಯ ಚಾಣಾಕ್ಷತೆಯಿದಾಗಿದೆ. ತಮ್ಮಲ್ಲಿಯೂ ಬದಲಾಯಿಸುವ ಜಾದೂ ಬರುವುದು, ಈಗ ಕಲಿತುಕೊಂಡಿದ್ದೀರಿ ಆದರೆ

ಜಾದೂಗಾರನಂತೆ ಅಲ್ಲ ಎಂದರೆ ಬೇಗನೆ ಬದಲಾಯಿಸಲಾಗುವುದಿಲ್ಲ. ಸಮಯ ಬೇಕಾಗುತ್ತದೆ. ಜಾದೂ ಮಾಡಲು ಎಷ್ಟು ಸಮಯ ಮಂತ್ರ ನೆನಪಿರುತ್ತದೆಯೋ ಅಷ್ಟು ಅವರ ಜಾದೂ ಸಫಲವಾಗುತ್ತದೆ. ತಮಗೂ ಮಹಾಮಂತ್ರ ನೆನಪಿದ್ದರೆ ಜಾದೂ ಸಮಾನ ಕಾರ್ಯವಾಗುವುದು. ಈಗ ಇದರಲ್ಲಿಯೇ ತಡವಾಗುತ್ತಿದೆ. ಈಗ ಈ ಭಟ್ಟಿಯಿಂದ ಏನಾಗಿ ಹೋಗುವಿರಿ? (ಜಾದೂಗಾರ) ಒಂದು ವೇಳೆ ಇಷ್ಟೊಂದು ಜಾದೂಗಾರರು ಮೂಲೆಮೂಲೆಗೂ ಹರಡಿದರೆ ಏನಾಗುವುದು? ಒಂದು ತಿಂಗಳೊಳಗೆ ಬೇರೆಯದೇ ದೃಶ್ಯ ಕಂಡುಬರುವುದು? ಈಗ ತಯಾರಿ ಮಾಡಬೇಕಲ್ಲವೇ. ಇಷ್ಟೊಂದು ಜಾದುಗಾರರು ಬದಲಾಯಿಸುವ ಕಾರ್ಯ ಶುರು ಮಾಡಿದರೆ ನಂತರ ಏನು ಮಾಡಬೇಕು? ಈ ರೀತಿಯ ನವೀನತೆಯನ್ನು ಬಾಪ್ ದಾದಾ ಮತ್ತು ತಾವುಗಳು ಸಹ ನೋಡ ಬಯಸುತ್ತೀರಿ. ಇವರಾರು, ಎಲ್ಲಿಂದ ಪ್ರಕಟರಾದರು. ಎಂಬುದು ಪ್ರಚಾರವಾಗಬೇಕು. ಒಂದೊಂದು ಸ್ಥಾನದಲ್ಲಿ ಯಾವುದೋ ಅಲೌಕಿಕ ಆತ್ಮ ಅವತರಿತವಾಗಿ ಹೋಗಿದೆ ಎಂದು ಅನುಭವವಾಗಬೇಕು. ಒಂದು ಅವತಾರ ಇಷ್ಟೊಂದು ಅನುಭವ ಮಾಡಿಸುವುದಾದರೆ ಇಲ್ಲಿ ಎಷ್ಟೊಂದು ಅವತಾರಗಳಿವೆ. **ನಾವು ಈ ಶರೀರದಲ್ಲಿ ಈಶ್ವರೀಯ ಸೇವೆಗಾಗಿ ಅವತರಿತರಾಗಿದ್ದೇವೆ*** ಎಂದು ತಿಳಿದು ಇಲ್ಲಿಂದ ಹೋಗಿ. ತಮ್ಮ ದೈವೀ ಪರಿವಾರದವರಾಗಲಿ, ಲೌಕಿಕ ಪರಿವಾರದವರಾಗಲಿ ಏನೋ ವಿಶೇಷವಾಗಿದ್ದಾರೆ, ಬದಲಾಣೆಯಾಗಿದ್ದರೆ ಎಂದು ಅನುಭವಮಾಡಬೇಕು. ತಮ್ಮಲ್ಲಿ ಬದಲಾವಣೆಯ ಅನುಭವವಾದಾಗ ಜಗತ್ತನ್ನು ಬದಲಿಸಬಲ್ಲಿರಿ. ತಮ್ಮಲ್ಲಿ ಬದಲಾವಣೆಯ ಅನುಭವವಾಗದಿದ್ದರೆ ಜಗತ್ತನ್ನು ಬದಲಿಸಲಾರಿರಿ. **ಸ್ವಯಂ ಪರಿವರ್ತನೆಯಿಂದ ವಿಶ್ವ ಪರಿವರ್ತನೆ** . ನಿಮಿತ್ತ ಮಾತ್ರ ಈ ಶರೀರವನ್ನು ಸಾಲವಾಗಿ ತೆಗೆದುಕೊಂಡು ಈಶ್ವರೀಯ ಕಾರ್ಯಕ್ಕಾಗಿ, ಸ್ವಲ್ಪ ದಿನಕ್ಕಾಗಿ ಅವತರಿತರಾಗಿದ್ದೇವೆ ಎಂದು ತಿಳಿಯಬೇಕು. ಕಾರ್ಯ ಸಮಾಪ್ತಿಯಾದಾಗ ಹೋಗುವುದು. ಈ ಸ್ಮೃತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಸ್ಥಿತಿಯನ್ನು ರೂಪಿಸಿಕೊಳ್ಳಬೇಕು. ಮತ್ತು ಇಲ್ಲಿಂದ ಹೊರಡಬೇಕು.

ಇದು ಹೂದೋಟವಾಗಿದೆ. ಬಾಪ್ ದಾದಾ ಚೈತನ್ಯ ಹೂದೋಟದಲ್ಲಿ ಬರುತ್ತಾರೆ. ಕೆಲವರು ವಾಣಿಯಿಂದ, ಕೆಲವರು ನಯನಗಳಿಂದ ಕೆಲವರು ಮಸ್ತಕದ ಮಣಿಯಿಂದ ಸುಗಂಧವನ್ನು ತೆಗೆದುಕೊಳ್ಳುತ್ತಾರೆ. ಪ್ರತಿಯೊಬ್ಬರ ಮಸ್ತಿಷ್ಕದ ಮಣಿಯ ಹೊಳಪನ್ನು ಬಾಪ್ ದಾದಾ ನೋಡುತ್ತಿದ್ದರು. ಇದೇ ರೀತಿ ತಾವೆಲ್ಲರೂ ಮಸ್ತಿಷ್ಕದ ಮಣಿಯನ್ನೇ ನೋಡುತ್ತಿದ್ದರೆ ಈ ದೃಷ್ಟಿ ಮತ್ತು ವೃತ್ತಿ ಶುದ್ಧ, ಸತೋಪ್ರಧಾನವಾಗುವುದು. ದೃಷ್ಟಿ ಚಂಚಲವಾಗಲು ಮೂಲ ಕಾರಣವಿದಾಗಿದೆ. ಮಸ್ತಿಷ್ಕದ ಮಣಿಯನ್ನು ಬಿಟ್ಟು ಶಾರೀರಿಕ ರೂಪವನ್ನು ನೋಡುತ್ತೀರಿ, ರೂಪವನ್ನು ನೋಡದೇ ಮಸ್ತಿಷ್ಕದ ಮಣಿಯನ್ನು ನೋಡಿ, ರೂಪವನ್ನು ನೋಡುವಾಗ ಸರ್ಪವನ್ನು ನೋಡುತ್ತಿರುವಿರೆಂದು ತಿಳಿಯಿರಿ. ಸರ್ಪದ ಶಿರದ ಮೇಲೆ ಮಣಿಯಿರುತ್ತದೆ. ಮಣಿಯನ್ನು ನೋಡಬೇಕು ಸರ್ಪವನ್ನಲ್ಲ. ಶರೀರದ ಭಾವನೆಯಿಂದ ನೋಡಿದರೆ ಸರ್ಪವನ್ನು ನೋಡಿದಂತೆ, ಸರ್ಪವನ್ನು ನೋಡಿದಿರಿ, ಸರ್ಪ ಕಚ್ಚಿತು. ಸರ್ಪ ತನ್ನ ಕಾರ್ಯ ಮಾಡುವುದು. ಸರ್ಪದಲ್ಲಿ ವಿಷವೂ ಇರುತ್ತದೆ. ಕೆಲವು ವಿಶೇಷ ಸರ್ಪಗಳಿಗೆ ಮಣಿಯಿರುತ್ತದೆ. ತಾವು (ಗೋಪರು) ಸರ್ಪವನ್ನು ಹೇಗೆ ಕೊಲ್ಲುವಿರಿ? ತಾವು ಸರ್ಪವನ್ನು ನೋಡುತ್ತಿದ್ದರೂ ನೋಡದಂತಿರಿ. ಮಣಿಯನ್ನೇ ನೋಡಿ, ಮಣಿಯನ್ನು ನೋಡುವುದರಿಂದ ಸರ್ಪದ ವಿಷ ಕಡಿಮೆಯಾಗುವುದು. ಶರೀರರೂಪಿ ಸರ್ಪವನ್ನು ನೋಡಿದರೆ ಅವರವರಾಗುತ್ತೀರಿ. ಅವರ ಸಮಾನರಾಗುತ್ತೀರಿ. ಆದರೆ ಮಣಿಯನ್ನು ನೋಡಿದರೆ ಬಾಪ್ ದಾದಾರ ಮಾಲೆಯ ಮಣಿಯಾಗುವಿರಿ. ಸರ್ಪದ ಸಮಾನರಾಗಬೇಕು ಅಥವಾ ಮಾಲೆಯ ಮಣಿಯಾಗಬೇಕು. ಮಣಿಯಾಗಬೇಕಾದರೆ ಮಣಿಯನ್ನೇ ನೋಡಿ, ಆಗ ತಮ್ಮ ಈ ದೂರು ಬದಲಾವಣೆಯಾಗಿ ಸಂಪೂರ್ಣರಾಗುವಿರಿ. ಕೇವಲ ಬುದ್ಧಿಯ ಪರೀಕ್ಷೆಯಿಂದ ಎಲ್ಲಿಯ ದೂರು ಎಲ್ಲಿಯ ಸಂಪೂರ್ಣತೆ, ಹಗಲು-ರಾತ್ರಿಯ ಅಂತರ, ಆದರೆ ಸಿಂಧಿ ಭಾಷೆಯಲ್ಲಿ ಬರೆದರೆ ಕೇವಲ ಎರಡು ಬಿಂದುಗಳ ಅಂತರ ಇಲ್ಲಿಯೂ ಹಾಗೆಯೇ ಇದೆ. ಒಂದು ಸ್ವಯಂ ಬಿಂದು ಎರಡನೆಯದು ತಂದೆ ಬಿಂದು. ಈ ಎರಡು ಬಿಂದುಗಳು ನೆನಪಿರಲಿ ಆಗ ದೂರಿನ (complaint) ಬದಲು ಸಂಪೂರ್ಣ(complete) ಆಗುವಿರಿ, ಆದ್ದರಿಂದ ತಮ್ಮೊಂದಿಗೆ ತಾವೇ ಇಂದಿನಿಂದ ಈ ಪ್ರತಿಜ್ಞೆಯನ್ನು ಮಾಡಿ ಬಾಪ್ ದಾದಾರವರ ಮುಂದೆ ಅನೇಕ ಪ್ರತಿಜ್ಞೆಗಳನ್ನು ಮಾಡಿರುವಿರಿ ಆದರೆ ಇಂದಿನಿಂದ "ಮಣಿಯನ್ನು ಬಿಟ್ಟು ಬೇರೆ ಏನನ್ನೂ ನೋಡುವುದಿಲ್ಲ ಮತ್ತು ನಾವೇ ಮಾಲೆಯ ಮಣಿಯಾಗಿ ಇಡೀ

ಸೃಷ್ಟಿಯಲ್ಲಿ ಪ್ರಕಾಶಿಸುತ್ತೇವೆ ಎಂದು ತಾವೇ" ಇಂದು ಪ್ರತಿಜ್ಞೆಮಾಡಿ. ಮಣಿಯಾದಾಗ ಪ್ರಕಾಶಿಸುವುದು, ಮಣಿಯಾಗದಿದ್ದರೆ ಪ್ರಕಾಶಿಸುವುದಿಲ್ಲ. ಪ್ರತಿಜ್ಞೆ ಮಾಡಿದಾಗ ಪ್ರತ್ಯಕ್ಷತೆಯಾಗುವುದು ತಮ್ಮೊಂದಿಗೆ ಪೂರ್ಣ ರೂಪದಲ್ಲಿ ಪ್ರತಿಜ್ಞೆ ಮಾಡುವುದಿಲ್ಲ ಆದ್ದರಿಂದ ಪ್ರತ್ಯಕ್ಷತೆಯೂ ಪೂರ್ಣ ರೂಪದಲ್ಲಿ ಆಗುವುದಿಲ್ಲ. ಪ್ರತ್ಯಕ್ಷತೆ ಕಡಿಮೆಯಾಗಲು ಕಾರಣ ತಮ್ಮೊಂದಿಗೆ ಮಾಡುವ ಪ್ರತಿಜ್ಞೆಯ ಕೊರತೆ, ಈಗೀಗ ಹೇಳುವಿರಿ ಮತ್ತೆ ಮರೆಯುವಿರಿ. ಆದರೆ ಪ್ರತಿಜ್ಞೆಯೊಂದಿಗೆ ಪ್ರತ್ಯಕ್ಷತೆಯನ್ನು ತರುವೆವೆಂದು ನಿಶ್ಚಯ ಮಾಡಿ ಆಗ ತಮ್ಮ ಪ್ರತಿಜ್ಞೆ ಪ್ರತ್ಯಕ್ಷವಾಗುವುದು. ಪಾಂಡವ ಸೇನೆಯವರು ಜ್ಞಾನಿ ಆತ್ಮರಾಗಿದ್ದಾರೆ ಮತ್ತು ಶಕ್ತಿಸೇನೆಯವರು ಸ್ನೇಹಿ ಆತ್ಮರಾಗಿದ್ದಾರೆ. ಯಾರು ಸ್ನೇಹಿಯಾಗಿರುವರೋ ಅವರು ಯೋಗಿಗಳು. ಈಗ ಒಬ್ಬೊಬ್ಬ ಪಾಂಡವರ ಮಸ್ತಕದಲ್ಲಿ ಉತ್ಸಾಹ-ಉಲ್ಲಾಸಗಳು ಹೊಮ್ಮುತ್ತಿವೆ. ಈ ಉತ್ಸಾಹ ಮತ್ತು ಉಲ್ಲಾಸಗಳು ಏಕರಸವಾಗಿರಲಿ, ತೆಗೆದುಕೊಂಡ ಪರಿಶ್ರಮದ ಫಲವನ್ನು ತೋರಿಸಬೇಕು. *ಪಡೆದ ಪರಿಶ್ರಮವನ್ನು ಇಲ್ಲಿ ಚುಕ್ತಾ ಮಾಡದಿದ್ದರೆ ಆ ಪರಿಶ್ರಮದ ಖಾತೆಯನ್ನು ಸತ್ಯಯುಗದಲ್ಲಿ ಕೊಡಬೇಕಾಗುತ್ತದೆ.* ಆದ್ದರಿಂದ ಪಡೆದ ಪರಿಶ್ರಮವನ್ನು ಚುಕ್ತಾ ಮಾಡಿ.

ಪ್ರತಿಯೊಂದು ಸೇವಾಕೇಂದ್ರದಿಂದ "**ಈ ಕುಮಾರ ಅವತರಿತನಾಗಿ ಪೃಥ್ವಿಯ ಮೇಲೆ ಬಂದಿದ್ದಾರೆ"** ಎಂದು ಸಮಾಚಾರ ಬರಬೇಕು. ಹೀಗೆ ಸಮಾಚಾರ ಬಂದಾಗ ಫಲ ಬರುತ್ತಿದೆಯೆಂದು ತಿಳಿಯಿರಿ. ಈಗ ಸ್ಥಿತಿಯ ಅವಶ್ಯಕತೆಯಿದೆ. ಬಾಪ್ ಮತ್ತು ದಾದಾ ಇಬ್ಬರೂ ಶರೀರವನ್ನು ಆಧಾರವಾಗಿ ತೆಗೆದುಕೊಂಡು ಸ್ವಲ್ಪ ಸಮಯಕ್ಕಾಗಿ ಬರುತ್ತಾರೆ ಏತಕ್ಕಾಗಿ? ಮಿಲನ ಮಾಡಲು. ಹಾಗೆಯೇ ತಾವೂ ಸಹ ಶರೀರವನ್ನು ಆಧಾರ ಮಾಡಿಕೊಂಡು ಸ್ವಲ್ಪ ಸಮಯಕ್ಕಾಗಿ ಸೇವೆಗೋಸ್ಕರ ಬಂದಿದ್ದೇವೆ ಎಂಬ ಸ್ಥಿತಿಯಾದಾಗ ತಂದೆಯ ಪ್ರಭಾವ ವಿಶ್ವದ ಮುಂದೆ ಬರುವುದು. ಸೇವೆ ತೆಗೆದುಕೊಳ್ಳುವ, ಕೊಡುವ ಲೆಕ್ಕ, ಎರಡೂ ಲೆಕ್ಕ ಸರಿಯಾಗಿದೆಯಲ್ಲವೇ? 6 ತಿಂಗಳು ಏಕರಸವಾಗಿರುವಿರೋ ಅಥವಾ 15 ದಿನಗಳ ನಂತರ ಇಚ್ಛೆ ಪಡುತ್ತೇವೆ ಆದರೆ ಏನು ಮಾಡುವುದು ಹೀಗಾಯಿತು ಎಂದು ಬರೆಯುವಿರಿ. ಈ ರೀತಿಯ ದೂರು ಬರಬಾರದು. ಆಗ ದೀದಿಯ ಕೆಲಸ ಹಗುರವಾಗುವುದು. ನೀವು ಸ್ವತಃ ಭಾರಿಯಾಗಿದ್ದಾಗ ಎಲ್ಲಾ ಕಾರ್ಯಗಳು ಭಾರಿ ಆಗಿಬಿಡುವವು. ಬಾಪ್ ದಾದಾರವರ ಆಸೆ ಎನ್ನಿರಿ ಅಥವಾ ಶುದ್ಧ ಸಂಕಲ್ಪ ಎನ್ನಿರಿ. ಅದು ಇದೇ ಆಗಿದೆ ಮತ್ತು ಇರುತ್ತದೆ ಕೂಡ "**ಪ್ರತಿಯೊಬ್ಬ ಮಗುವು ನಂಬರ್ ಒನ್ ಆಗಬೇಕು ಎಂದು"** . ಆದರೆ ಇಡೀ ಕಲ್ಪದಲ್ಲಿ ಈಗಿನ ಸ್ಥಿತಿಯಂತೂ ನಂಬರ್ ಒನ್ ಆಗಿದೆ ತಾನೇ ಮತ್ತು ಇದೇ ವಾಸ್ತವಿಕ ಸಂಪೂರ್ಣ ಸ್ಟೇಜ್ ಆಗಿದೆ. ಆದ್ದರಿಂದ ಹೇಳುತ್ತಿದ್ದೇವೆ. ಎಲ್ಲರೂ ನಾವು ನಂಬರವನ್ ಆಗಬೇಕೆಂಬ ಲಕ್ಷ್ಯವನ್ನಿಟ್ಟುಕೊಳ್ಳಿ. ಎಲ್ಲರೂ ನಂಬರವನ್ ಆಗಲು ಸಾಧ್ಯವಿಲ್ಲ ಎಂದು ಯೋಚಿಸಬೇಡಿ. ಇದರಲ್ಲಿ ಮಹಾದಾನಿಗಳಾಗಬೇಡಿ. ಎರಡು ಮುಖ್ಯ ಮಾತುಗಳನ್ನು ನೆನಪಿಟ್ಟುಕೊಳ್ಳಿ, ಒಂದು ಮಣಿಯನ್ನು ನೋಡುವುದು, ದೇಹರೂಪದ ಸರ್ಪವನ್ನು ನೋಡಬಾರದು ಮತ್ತು ಎರಡನೆಯ ಮಾತು ತಮ್ಮನ್ನು ಅವತರಿತ ಎಂದು ತಿಳಿದುಕೊಳ್ಳಿ. ಈ ಶರೀರದಲ್ಲಿ ಅವತರಿತರಾಗಿ ಕಾರ್ಯವನ್ನು ಮಾಡುವುದು. ಮತ್ತು ಒಂದು ಸ್ಲೋಗನ್ ಸದಾ ನೆನಪಿಟ್ಟುಕೊಳ್ಳಿ- *ಬಾಪ್ ದಾದಾ ಏನು ಹೇಳುತ್ತಾರೋ, ಏನು ಮಾಡಿಸುತ್ತರೋ, ಹೇಗೆ ನಡೆಸುತ್ತಾರೋ ಹಾಗೆಯೇ ಮಾಡುತ್ತೇವೆ, ನಡೆಯುತ್ತೇವೆ. ಮಾತನಾಡುತ್ತೇವೆ ಮತ್ತು ನೋಡುತ್ತೇವೆ* . ಪಾಂಡವ ಸೇನೆಯ ಮುಖ್ಯ ಸ್ಲೋಗನ್ ಇದಾಗಿದೆ. ಏನು ಹೇಳುತ್ತಾರೋ ಅದನ್ನೇ ಆಲೋಚಿಸುತ್ತೇವೆ ಮತ್ತೇನೂ ಯೋಚಿಸುವುದಿಲ್ಲ. ಈ ಕಣ್ಣುಗಳಿಂದ ಬೇರೆ ಏನನ್ನೂ ನೋಡುವುದಿಲ್ಲ, ಏಕೆಂದರೆ ಕಣ್ಣುಗಳನ್ನು ಕೊಟ್ಟಿದ್ದೇವಲ್ಲವೇ? ಸಂಪೂರ್ಣ ದೀಪದ ಹುಳುಗಳಾಗಿದ್ದೀರಿ ತಾನೆ?. ದೀಪದ ಹುಳು ದೀಪದ ಹೊರತು ಮತ್ಯಾವುದನ್ನಾದರೂ ನೋಡಲು ಬರುತ್ತದೆಯೇ? ಹಾಗಾದರೆ ನಿಮ್ಮ ಕಣ್ಣುಗಳು ಏಕೆ ನೋಡುತ್ತಿವೆ? ಬೇರೆ ಏನನ್ನಾದರೂ ನೋಡಿದರೆ ಮೋಸ ಮಾಡುತ್ತವೆ. ನಿಮಗೆ ನೀವೇ ಮೋಸವನ್ನು ಮಾಡಿಕೊಳ್ಳಬೇಡಿ ಸಂಪೂರ್ಣ ಅರ್ಥಾತ್ ಪೂರ್ಣ ದೀಪದ ಹುಳು. ಇದೇ ಗುರುತಾಗಿದೆ. ಫಲಿತಾಂಶವಂತೂ ಚೆನ್ನಾಗಿದೆ ಆದರೆ ಅದನ್ನು ಅವಿನಾಶಿಯಾಗಿ ಮಾಡಬೇಕು. ಯಾವಾಗ, ಯಾವ ರೀತಿ ಬೇಕಾದರೆ, ಆ ಸ್ಥಿತಿಯಲ್ಲಿ ಸ್ಥಿತರಾಗಬೇಕು. ಈ ಮನಸ್ಸಿನ ವ್ಯಾಯಾಮವನ್ನು ಮಾಡಿರಿ. ಇದನ್ನು ಅವಶ್ಯವಾಗಿ ಅಭ್ಯಾಸ ಮಾಡಿರಿ. ಒಂದು ಸೆಕೆಂಡಿನಲ್ಲಿ ಶಬ್ದದಲ್ಲಿ ಮತ್ತೊಂದು ಸೆಕೆಂಡಿನಲ್ಲಿ ಶಬ್ದದಿಂದ ಅತೀತರಾಗಿ. ಒಂದು ಸೆಕೆಂಡಿನಲ್ಲಿ ಸೇವೆಯ ಸಂಕಲ್ಪದಲ್ಲಿ ಬರುವುದು ಮತ್ತು ಒಂದು

ಸೆಕೆಂಡಿನಲ್ಲಿ ಸಂಕಲ್ಪದಿಂದ ಅತೀತ ಸ್ವರೂಪದಲ್ಲಿ ಸ್ಥಿತರಾಗಿರಿ. ಈ ವ್ಯಾಯಾಮದ ಬಹಳ ಅವಶ್ಯಕತೆ ಇದೆ. ದೇಹಬಾನದಿಂದ ಹೊರ ಬರಲಾಗದ ಸ್ಥಿತಿ ನಿಮ್ಮದಾಗಬಾರದು. ಒಂದು ಸೆಕೆಂಡಿನಲ್ಲಿ ಕಾರ್ಯದ ಪ್ರತಿ ದೇಹಬಾನದಲ್ಲಿ ಬರುವುದು ಮತ್ತೆ ಒಂದು ಸೆಕೆಂಡಿನಲ್ಲಿ ಅಶರೀರಿ ಆಗಿ ಬಿಡುವುದು. ಯಾರ ಈ ವ್ಯಾಯಾಮ ಪಕ್ಕಾ ಆಗುವುದೋ ಅವರು ಎಲ್ಲ ಪರಿಸ್ಥಿತಿಗಳನ್ನು ಎದುರಿಸಬಲ್ಲರು. ಶಾರೀರಿಕ ವ್ಯಾಯಾಮವನ್ನು ಹೇಗೆ ಬೆಳಿಗ್ಗೆ ಮಾಡಲಾಗುತ್ತದೆಯೋ ಹಾಗೆಯೇ ಈ ಅವ್ಯಕ್ತ ವ್ಯಾಯಾಮವನ್ನು ಅಮೃತವೇಳೆ ವಿಶೇಷ ರೂಪದಲ್ಲಿ ಮಾಡಬೇಕು. ಇಡೀ ದಿನ ಮಾಡಬೇಕು ಆದರೆ ವಿಶೇಷ ಅಭ್ಯಾಸ ಮಾಡುವ ಅಮೃತವೇಳೆಯಾಗಿದೆ. ಬುದ್ಧಿ ಯಾವಾಗ ಹೆಚ್ಚು ವ್ಯಸ್ತವಾಗಿದೆಯೆನಿಸುತ್ತದೆಯೋ ಆ ಸಮಯ ಈ ಅಭ್ಯಾಸವನ್ನು ಮಾಡಿ. ಅನೇಕ ಪರಿಸ್ಥಿತಿಯಲ್ಲಿರುತ್ತಿದ್ದರೂ ನಾವು ನಮ್ಮ ಬುದ್ಧಿಯನ್ನು ಅಲಿಪ್ತ ಮಾಡಿಕೊಳ್ಳಬಹುದು ಆದರೆ ಏನೇ ಕೆಲಸವನ್ನು ಮಾಡುವಾಗ ಅಲಿಪ್ತ ಸ್ಥಿತಿಯಲ್ಲಿದ್ದು ಮಾಡಿದಾಗ ನಿರ್ಲಿಪ್ತರಾಗಲು ಸಾಧ್ಯ ಆ ಕೆಲಸದ ಪ್ರತಿ ಮೋಹವಿದ್ದರೆ ಒಂದು ಕ್ಷಣದಲ್ಲಿ ನಿರ್ಲಿಪ್ತರಾಗಲು ಸಾಧ್ಯವಿಲ್ಲ. ಆದ್ದರಿಂದ ಇದನ್ನು ಎಂತಹದೇ ಪರಿಸ್ಥಿತಿಯಿರಲಿ ಅಭ್ಯಾಸ ಮಾಡಿ. ಏಕೆಂದರೆ ಅಂತಿಮ ಪರೀಕ್ಷೆ ಅನೇಕ ಪ್ರಕಾರದ ಭಯಾನಕ ಮತ್ತು ಇಚ್ಛೆಯಿಲ್ಲದಿದ್ದರೂ ತಮ್ಮೆಡೆಗೆ ಆಕರ್ಷಿಸುವಂತಹ ಪರಿಸ್ಥಿತಿಗಳ ಮಧ್ಯದಲ್ಲಿ ಇರುತ್ತದೆ. ಅವುಗಳಿಗೆ ಹೋಲಿಸಿದಾಗ ಇತ್ತೀಚಿನ ಪರಿಸ್ಥಿತಿಗಳು ಏನೂ ಅಲ್ಲ. ಬರಲಿರುವ ಅಂತಿಮ ಪರಿಸ್ಥಿತಿಯಲ್ಲಿ ಪರೀಕ್ಷೆಯಾಗಲಿದೆ. ಇದಕ್ಕೆ ಸಿದ್ಧತೆ ಮೊದಲೇ ಮಾಡಿಕೊಳ್ಳಬೇಕು. ಆದ್ದರಿಂದ ತಮ್ಮನ್ನು ತಾವು ನೋಡಿಕೊಂಡಾಗ, ನಾನು ಬಹಳ ವ್ಯಸ್ತನಾಗಿದ್ದೇನೆ ಎಂದು ತಿಳಿಯುತ್ತೀರೋ, ಬುದ್ಧಿ ಬಹಳ ಸ್ಥೂಲ ಕಾರ್ಯದಲ್ಲಿ ವ್ಯಸ್ತವಾಗಿದೆ, ನಾಲ್ಕೂ ಕಡೆಗಳಲ್ಲೂ ಪರಿಸ್ಥಿತಿಗಳು ತಮ್ಮೆಡೆಗೆ ಎಳೆಯುತ್ತಿರುವ ಸಮಯದಲ್ಲಿ ಈ ಅಭ್ಯಾಸವನ್ನು ಮಾಡಿ, ನಾವು ಎಷ್ಟರಮಟ್ಟಿಗೆ ವ್ಯಾಯಾಮ ಮಾಡಲು ಸಾಧ್ಯವೆಂದು ಆಗ ಗೊತ್ತಾಗುವುದು. ಈ ಮಾತು ಬಹಳ ಅವಶ್ಯಕವಾಗಿದೆ. ಇದೇ ವ್ಯಾಯಾಮದಲ್ಲಿರುತ್ತಿದ್ದರೆ ಸಫಲತೆಯನ್ನು ಪಡೆಯುವಿರಿ. ಒಂದೊಂದು ವಿಷಯಕ್ಕೂ ನಂಬರ್ ಇದೆ. ಇದು ಮುಖ್ಯವಾದದ್ದು. ಇದರಲ್ಲಿ ಚೆನ್ನಾಗಿದ್ದರೆ ನಂಬರ್ ಮುಂದೆ ಪಡೆಯಬಹುದು. ಒಂದು ವೇಳೆ ಈ ವಿಷಯದಲ್ಲಿ ನಂಬರ್ ಕಡಿಮೆಯಿದ್ದರೆ ಅಂತಿಮವಾಗಿ ನಂಬರ್ ಕಡಿಮೆಯಾಗುತ್ತದೆ. ಆದ್ದರಿಂದ ಜ್ಞಾನಿ 'ಆತ್ಮಗಳ ಜೊತೆಗೆ ಸ್ನೇಹಿಯಾಗಿ ಎಂದು ಮೊದಲೇ ಹೇಳಿದ್ದೆವು. ಯಾರು ಸ್ನೇಹಿಯಾಗಿರುವರೋ ಅವರು ಸ್ನೇಹವನ್ನು ಪಡೆದುಕೊಳ್ಳುವರು. ಯಾರೊಂದಿಗೆ ಹೆಚ್ಚು ಸ್ನೇಹವಿರುವುದೋ ಅವರಿಗೆ ಇವರು ಸ್ನೇಹದಲ್ಲಿ ಎಲ್ಲವನ್ನೂ ಮರೆತಿರುವರು ಎಂದು ಹೇಳುತ್ತಾರೆ. ತಮ್ಮ ಸ್ವರೂಪದ ಸ್ಮೃತಿಯನ್ನು ಮರೆತಿರುವರು ಎಂದು ಇದರ ಅರ್ಥವಾಗಿದೆ. ಬುದ್ಧಿಯ ಸಂಬಂಧವೂ ಬೇರೆ ಎಲ್ಲೂ ಇರಬಾರದು. ಈ ರೀತಿ ಇರುವವರಿಗೆ ಸ್ನೇಹಿ ಎಂದು ಹೇಳಲಾಗುತ್ತದೆ.

ಈ ಗ್ರೂಪಿನ ವಿಶೇಷತೆ ಏನೆಂದರೆ...ಎಲ್ಲ ಮಾತುಗಳನ್ನು ಕಲಿಯಲು ಮತ್ತು ಧಾರಣೆ ಮಾಡಲು ಮತ್ತು ಮುಂದೆಯೂ ತಮ್ಮನ್ನು ಅದರಲ್ಲಿ ಮುಂದುವರೆಸಿಕೊಂಡು ಹೋಗಲು ಇಚ್ಛೆಯುಳ್ಳವರಾಗಿದ್ದಾರೆ. ಈ ಗುಂಪಿನ ವಿಶೇಷ ಗುಣ ಇದಾಗಿದೆ. ಚಾತ್ರಕರಾಗಿದ್ದೀರಿ ಆದರೆ ಜೊತೆಗೆ ಚರಿತ್ರವಂತರಾಗಿ, ಚಾತ್ರಕರಾಗಿದ್ದೀರಿ ಇದೇ ಈ ಗುಂಪಿನ ವಿಶೇಷತೆಯಾಗಿದೆ. ಆದರೆ ಚಾತ್ರಕದ ವಿಶೇಷತೆ ಅದರ ನೀರಡಿಕೆ (ದಾಹ). ಈ ಚಿತ್ರವನ್ನು ಚರಿತ್ರೆಯಲ್ಲಿ ನೋಡಿ ಆಗ ಯಾತ್ರಕರ ಜೊತೆ-ಜೊತೆಗೆ ಯೋಗ್ಯರಾಗುವಿರಿ, ಈಗ ಚಾತ್ರಕ ಪಕ್ಷಿಯಾಗಿರುವಿರಿ. ನಂತರ ಫಲಿತಾಂಶ ಬಂದ ಮೇಲೆ ಎರಡು ಬಿರುದುಗಳು ಸಿಗುವವು. ನಂತರ ವಿಜಯ ಮಾಲೆಗೆ ಸಮೀಪ ಬರಲು ಪಾತ್ರರಾಗುವಿರಿ. ಹೇಳಿದಂತಹ ಸ್ಲೋಗನ್ ಮತ್ತು ಭಟ್ಟಿಯ ಗುರುತು ಸದಾ ಇಟ್ಟುಕೊಳ್ಳಿ ಆಗ ಎರಡೂ ಗುಣಗಳು ಬರುವವು. ಒಳ್ಳೆಯದು.

ಅವ್ಯಕ್ತ ಮುರಳಿ 16-10-1969.

***ಪರಿಶೀಲಿಸುವ/ ಪರೀಕ್ಷಿಸುವ ಶಕ್ತಿಯನ್ನು ತೀವ್ರಗೊಳಿಸಿ***

ಯೋಗ ಸ್ಥಿತಿಯಲ್ಲಿ ಇದ್ದು ಮನನ-ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾದ ಸಂಕಲ್ಪಗಳು.

**ಯೋಗ ಸ್ಥಿತಿ/ಆತ್ಮಿಕ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನಿರಂತರ ಯೋಗಿ.

2. ನಾನು ದಿವ್ಯ ಗುಣಮೂರ್ತಿ.

3. ನಾನು ನಿರಂತರ ಅವ್ಯಕ್ತ ಸ್ಥಿತಿಯಲ್ಲಿದ್ದು ಪರಿಶೀಲಿಸುವ ಅಭ್ಯಾಸವಿರುವ ಪರಿಶೀಲನಾ ಶಕ್ತಿ ಸ್ವರೂಪ.

4. ನಾನು ಬುದ್ಧಿಯನ್ನು ಸದಾ ಸ್ವಚ್ಛವಾಗಿ ಇಟ್ಟುಕೊಂಡಿರುವ ನಿರ್ಣಯ ಶಕ್ತಿ ಸ್ವರೂಪ.

5. ನಾನು ಮಹಾಮಂತ್ರ (ಮನ್ಮನಾ ಭವ) ವನ್ನು ಸದಾ ನೆನಪಿಡುವ ಸಫಲತಾ ಮೂರ್ತಿ.

6. ನಾನು ಈಶ್ವರೀಯ ಕಾರ್ಯಕ್ಕಾಗಿ ನಿಮಿತ್ತ ಮಾತ್ರವಾಗಿ ಈ ಶರೀರವನ್ನು ಪಡೆದಿದ್ದೇನೆ.

7. ನಾನು ಮಣಿಯನ್ನು ಬಿಟ್ಟು ಬೇರೆ ಏನನ್ನೂ ನೋಡುವುದಿಲ್ಲ ಮತ್ತು ನಾನೇ ಮಾಲೆಯ ಮಣಿಯಾಗಿ ಸೃಷ್ಟಿಯಲ್ಲಿ ಪ್ರಕಾಶಿಸುತ್ತೇನೆ ಎಂಬ ಪ್ರತಿಜ್ಞೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

8. ನಾನು ಸಂಪೂರ್ಣ ಸ್ವರೂಪ.

9. ನಾನು ಪ್ರತಿಯೊಂದು ಪ್ರತಿಜ್ಞೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

10. ನಾನು ನಂಬರ್ ವನ್ ಆಗಬೇಕೆಂಬ ಶ್ರೇಷ್ಠ ಲಕ್ಷ್ಯದಾರಿ.

11. ನಾನು ಒಂದು ಕ್ಷಣದಲ್ಲಿ ಶಬ್ದ ಮತ್ತೊಂದು ಕ್ಷಣದಲ್ಲಿ ಶಬ್ದಕ್ಕೆ ಅತೀತವಾಗುವ ಆತ್ಮಿಕ ವ್ಯಾಯಾಮವನ್ನು ಮಾಡುತ್ತಿದ್ದೇನೆ.

12. ನಾನು ಪ್ರತಿಯೊಂದು ಕಾರ್ಯವನ್ನು ಅತೀತ ಸ್ಥಿತಿಯಲ್ಲಿದ್ದು ಮಾಡುವ ಕರ್ಮಾತೀತ ಸ್ಥಿತಿ ಸ್ವರೂಪ.

13. ನಾನು ಚಾತ್ರಕನು ಮತ್ತು ಚರಿತ್ರೆವಂತನು.